ಗಾಳಿಯಲ್ಲಿ ಕಲೆತು ಬಂದುಬಿಡುತ್ತದೆ. ನಿಜವಾಗಲೂ ಸ್ವಂತ ಬಯಕೆ ಎಂಬುದೊಂದು ಯಾರಿಗೂ ತನ್ನಷ್ಟಕ್ಕೆ ಹೊಂದಿ ಬರಲಾರದೆಂದು ಕಾಣುತ್ತದೆ.

ಹೆಸರಿನ ಹೊರತು, ಮಿಕ್ಕೆಲ್ಲದರಲ್ಲೂ ನವನವೀನ ನಾಗರಿಕ ಹೆಣ್ಣೇ ಶೆಂಬಾಯಿಅಪ್ಪತ್ತಾ. ಹೆಸರಿನೊಂದಿಗೆ 'ಅಪ್ಪತ್ತಾ' ಎಂಬ ಸಂಬಂಧ ಸೂಚಕ ಪದವೂ ಅವರ ಗುರುತಾಗಿ ಅಂಟಿಕೊಂಡಿರುವುದು ಒಂದು ವಿಪರ್ಯಾಸ. ಏನು ಮಾಡುವುದು? ರಾಜಕುಮಾರಿ ಎಂಬ ಹೆಸರಿರುವ ಸೇಲಂ ಚಿಕ್ಕಮ್ಮನ ಬಣ್ಣವೂ ರೂಪವೂ ತದ್ವಿರುದ್ಧ. ಅದೇ ರೀತಿಯಾಗಿ ಪಾಪ್ಪ ಎಂಬ ದಪ್ಪಗಿನ ಕಲಾ ಅಕ್ಕ. ಹೋಗಲಿ ಬಿಡಿ. ಶೆಂಬಾಯಿ ಎಂದರೆ ಏನು ಅರ್ಥ ಎಂದು ಅಮ್ಮನನ್ನು ಕೇಳಿ ತಿಳಿದುಕೊಂಡೆ. 'ಶೆಂಬಾಯಿ' ಎಂಬುದು ಅವರ ಕುಲದೇವರ ಹೆಸರು. ಶೆಂಬು ಆಯಿ ಎಂಬುದು ಶೆಂಬಾಯಿ ಆಗಿರಬೇಕು ಎಂದು ಈಗ ತೋಚುತ್ತಿದೆ. ಇವರಿಗೆ ಹೆಸರು ಹೊಂದಿಬಂದಿದೆ. ತೊಳೆದಿಟ್ಟ ಹಿತ್ತಾಳೆ ಚೊಂಬಿನಂತೆ, ಹಾಗೊಂದು ಹೊಳಪು ಅಪ್ಪತ್ತಾ ಬಳಿ. ಅದಕ್ಕಿಂತ ಹೆಚ್ಚಾಗಿ ಕಂಚಿನ ದನಿ. ಮನೆಯೊಳಗೆ ಬರುತ್ತಿದ್ದಂತೆ ನನ್ನ ಹೆಸರನ್ನು ಕೂಗಿ ಕರೆಯುವ ಸೊಗಸಿಗೆ ನಾನು ಮರುಳಾಗಿಹೋಗುವೆ. ಏನು ಕೆಲಸವಿದ್ದರೂ ಹಾಗೆಯೇ ಬಿಟ್ಟೋಡಿ ಅವರ ಮುಂದೆ ಹೋಗಿ ನಿಲ್ಲುವಂತೆ ಸೆಳೆಯುವ ಅಯಸ್ಕಾಂತದಂತಹ ದನಿ ಅವರದು. ದನಿಯಲ್ಲಿ ಮಾತ್ರವೇ ಅಯಸ್ಕಾಂತ? ಬೀದಿಯಲ್ಲಿ ಹೋಗುವ ಎಂತಹವರನ್ನು ಒಮ್ಮೆ ತಿರುಗಿ ನೋಡುವಂತೆ ಮಾಡುವ ರೂಪವಂತೆ; ಇಂಥಾ ವಶೀಕರಣ ಕೆಲವರಿಗೆ ಮಾತ್ರವೇ ಲಭಿಸುವುದು.

ಅದಕ್ಕಾಗಿ ಇವರನ್ನು ಪಡೆದವರು ಪುಣ್ಯವಂತರು ಎಂದು ಹೇಳಲಾಗದು. ಅವರು ಗಂಡನ ಜೊತೆಯಾಗಿ ಬಂದದ್ದನ್ನು ನಾನು ಎಂದೂ ನೋಡಿಲ್ಲ. ಅಷ್ಟು ಮಾತ್ರವಲ್ಲ, ನನಗೆ ಚಿಕ್ಕಪ್ಪ, ದೊಡ್ಡಪ್ಪ ಎಂದು ಹೇಳಿಕೊಳ್ಳಲು ಅವರು ಯಾರನ್ನೂ ಹೆತ್ತಿರಲಿಲ್ಲ. ನಿತ್ಯಕನ್ನೆಯಂತೆ ಸದಾ ನಿತ್ಯ ಶ್ರೀಮತಿ. ಆಕೆಯನ್ನು ಬಂಜೆ ಎಂದು ಕರೆಯಲು ನನಗೆ ಇಷ್ಟವಿಲ್ಲ. ಶೆಂಬಾಯಿಅಪ್ಪತ್ತಾಗೆ ಮಕ್ಕಳಿಲ್ಲವೆಂದು ಅವರ ಗಂಡ ಮತ್ತೊಂದು ಮದುವೆ ಮಾಡಿಕೊಂಡರಂತೆ. ಅದಕ್ಕೂ ಸಹಾ ಶೆಂಬಾಯಿಅಪ್ಪತ್ತಾ ಸಮ್ಮತಿಸಿದರೆಂದು ಅಮ್ಮ ಒಮ್ಮೆ ಹೇಳಿದ್ದಳು.

ನಾನು ಮೊಟ್ಟಮೊದಲು ಎಲ್ಲಿ ಶೆಂಬಾಯಿಅಪ್ಪತ್ತಾರನ್ನು ನೋಡಿದೆ ಎಂಬುದು ಜ್ಞಾಪಕವಿಲ್ಲ. ಅಲ್ಲೊಂದು ಇಲ್ಲೊಂದಾಗಿ ನಡೆದ ಘಟನೆಗಳನ್ನು ಕೂಡಿ ಕಳೆದರೆ ಒಬ್ಬರ ಬಗ್ಗೆಯ ಚಿತ್ರ ಮೂಡುವುದಲ್ಲವೇ ಹಾಗೆಯೇ ಶೆಂಬಾಯಿಅಪ್ಪತ್ತಾ ಬಗ್ಗೆಯೂ ಸಹಾ. ಅಮ್ಮ ಹುಟ್ಟಿದ ಊರಿನಲ್ಲಿ ಹುಟ್ಟಿದವಳು ಶೆಂಬಾಯಿಅಪ್ಪತ್ತಾ. ಅಮ್ಮನಿಗೆ ಮೊದಲೇ ಮದುವೆಯಾಗಿ ಅಮ್ಮನ ಊರಿಗೆ ಬಂದವರು. ಒಂದು ರೀತಿಯಲ್ಲಿ ಅಮ್ಮನ ದಾಯಾದಿಗಳ ಮಗಳು ಶಂಬಾಯಿಅಪ್ಪತ್ತಾ. ಅವರ ಅಣ್ಣ, ಅಮ್ಮನಿಗೆ ಅಣ್ಣನ ಸಂಬಂಧ. ಅಣ್ಣನಾದರೂ 'ಅಪ್ಪನ ಅಪ್ಪ' ಎಂದೇ ಅಮ್ಮನ ಮನೆಯ ನೆಂಟರು ಕರೆದು ಅಭ್ಯಾಸ. ನಿಜವೇ, ಅಪ್ಪನಿಗೆ ಇರಬೇಕಾದ ಸಕಲ ಗುಣಗಳು ಅವರಲ್ಲಿದೆ. 'ಅಪ್ಪ' ಎಂಬ ಪದದ ಹೊರತಾಗಿ ಬೇರೆ ಯಾವ ರೀತಿಯಲ್ಲೂ ಕರೆಯಲಾಗದ ಒಳ್ಳೆಯ ಮನುಷ್ಯ. ಆ ಮಾವ ಗದರಿಸಿ ಮಾತನಾಡಿ, ಆತುರಪಡುವುದನ್ನು ಎಂದೂ ನೋಡಿರಲಿಲ್ಲ. ಅಮ್ಮನಿಗೆ ಅವರ ಹೆಸರಿನದೇ ಗಂಡು ಬರಲು, ನಿರಾಕರಿಸದೆ ಅಮ್ಮ ಮದುವೆಮಾಡಿಕೊಂಡಳೇನೋ. ಇವಕ್ಕೆಲ್ಲಾ ಕಾರಣಗಳನ್ನು ಕಂಡು ಹಿಡಿಯಲು ಸಾಧ್ಯವೇ, ಏನು?

ಶೆಂಬಾಯಿಅಪ್ಪತ್ತಾರನ್ನು ನಮ್ಮ ಊರಿನಲ್ಲೂ ಅವರ ಊರಿನಲ್ಲೂ ನೋಡಿದ್ದೇನೆ. ಎರಡೂ ಕಡೆ ಅರಮನೆಯಂತಹ ಮನೆ ಅವರಿಗೆ. ಹುಟ್ಟಿದ ಊರಿನಲ್ಲೂ, ಬಂದು ಸೇರಿಕೊಂಡ ಮನೆಯಲ್ಲೂ. ಒಂದೇ ವ್ಯತ್ಯಾಸ, ಹುಟ್ಟಿದ ಮನೆಯಲ್ಲಿ ತೋಟ, ಗದ್ದೆ ಊರಿನಾಚೆ ತುಂಬ